# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 Volume:01 • ಸಂಚಿಕೆ:284 Issue:284 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 09.04.2024 09.04.2024 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2


**ಮತದಾನ ನಮ್ಮ ಇರುವಿಕೆಗೆ ಸಾಕ್ಷಿ ಮರೆಯದಿರಿ ಮತದಾನ**






### ಬಿಡುವು

ಸಮಸ್ತ ಓದುಗರಿಗೆ, ಜಾಹೀರಾತುದಾರರಿಗೆ, ಬರಹಗಾರರು, ಲೇಖಕರಿಗೆ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು.

ಕ್ರೋಧಿ ನಾಮಸಂವತ್ಸರದ ಯುಗಾದಿ ಹಬ್ಬದ ನಿಮಿತ್ತ ದಿನಾಂಕ ಏ.9 ರಂದು ಮಂಗಳವಾರ ಕಚೇರಿಗೆ ಬಿಡುವು ಇರುತ್ತದೆ. ಏ.10ರ ಬುಧವಾರದ ಸಂಚಿಕೆ ಇರುವುದಿಲ್ಲ.

ಸಂಪಾದಕರು.

### ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

# ಶತ ಪ್ರತಿಶತ ಮತದಾನ ವಿಜಯನಗರ ಜಿಲ್ಲೆಯ ವಾಗ್ದಾನ

## ಲೋಕಸಭಾ ಚುನಾವಣೆ: ಸ್ವೀಪ್ ಸಮಿತಿಯಿಂದ ಹೊಸಪೇಟೆಯಲ್ಲಿ ಮತದಾನ ಜಾಗೃತಿ ಅಭಿಯಾನ

■ ಹಂಪಿ ಟೈಮ್ಸ್ ಹೊಸಪೇಟೆ

ಲೋಕಸಭಾ ಸಾರ್ವತ್ರಿಕ ಚುನಾವಣೆ-2024ರ ಹಿನ್ನೆಲೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ, ತಾಲೂಕು ಸ್ವೀಪ್ ಸಮಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಭಾರತೀಯ ವೈದ್ಯಕೀಯ ಸಂಘ ಹೊಸಪೇಟೆ ಇವರ ಸಹಯೋಗದಲ್ಲಿ ಏಪ್ರೀಲ್ 8ರಂದು ಮತದಾರರ ಜಾಗೃತಿ ಅಭಿಯಾನ ನಡೆಯಿತು.

ಮತದಾನ ಜಾಗೃತಿ ಅಭಿಯಾನದ ಜಾಥಾವು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಸರ್ಕಲ್‌ನಿಂದ ಆರಂಭಗೊಂಡು 4ನೇ ವಾರ್ಡ್, ಪಟೇಲ್ ನಗರ, 3ನೇ ವಾರ್ಡ್ ಸೇರಿದಂತೆ ವಿವಿಧೆಡೆ ಸಂಚರಿಸಿ ಡಾ.ಪುನೀತ್ ರಾಜ್‌ಕುಮಾರ್ ವೃತ್ತಕ್ಕೆ ಬಂದು ತಲುಪಿತು. ನಿಮ್ಮ ಮತ ನಿಮ್ಮ ಹಕ್ಕು, ಕಡ್ಡಾಯವಾಗಿ ಮತದಾನ ಮಾಡಿ, ಯಾವುದೇ ಮತದಾರ




ಮತದಾನದಿಂದ ಹೊರಗುಳಿಯಬಾರದು, ಶತ ಪ್ರತಿಶತ ಮತದಾನ ವಿಜಯನಗರ ಜಿಲ್ಲೆಯ ವಾಗ್ದಾನ ಎನ್ನುವ ಘೋಷಣೆಗಳನ್ನು ಹಾಕಿ ಮತದಾರರಲ್ಲಿ ಮತದಾನ ಜಾಗೃತಿಯನ್ನು ಮೂಡಿಸಲಾಯಿತು.

ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸದಾಶಿವ ಪ್ರಭು ಬಿ ಅವರು ಜಾಥಾಕ್ಕೆ ಚಾಲನೆ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ಶಂಕರ್ ನಾಯ್ಕ ಎಲ್.ಆರ್., ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಜಂಬಯ್ಯ, ಭಾರತೀಯ ವೈದ್ಯಕೀಯ ಸಂಘದ ಅಧ್ಯಕ್ಷರಾದ ಡಾ.ಶ್ರೀನಿವಾಸ ದೇಶಪಾಂಡೆ, ಕಾರ್ಯದರ್ಶಿ ಡಾ.ರಾಜೀವ್ ಹಾಗು ಹೊಸಪೇಟೆ ನಗರದ ಖಾಸಗಿ ಆಸ್ಪತ್ರೆಗಳ ವೈದ್ಯರು, ನಗರ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳು, ತಾಲೂಕು ಪಂಚಾಯತಿ ಸಿಬ್ಬಂದಿ, ಆಶಾ ಕಾರ್ಯಕರ್ತರು, ಅಂಗನವಾಡಿ ಮತ್ತು ಹೊಸಪೇಟೆಯ ನರ್ಸಿಂಗ್ ಕಾಲೇಜಿನ ಬೋಧಕ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಮತದಾನ ಜಾಗೃತಿ ಅಭಿಯಾನದಲ್ಲಿ ಭಾಗಿಯಾಗಿದ್ದರು.

> ಕಳೆದ ಚುನಾವಣೆಗಳಲ್ಲಿ ಕಡಿಮೆ ಮತದಾನವಾಗಿರುವ ಪ್ರದೇಶಗಳಲ್ಲಿ ಮತದಾನದ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮತದಾರರ ಜಾಗೃತಿ ಜಾಥಾ ನಡೆಸಲಾಗುತ್ತಿದೆ.
>
> **ಸದಾಶಿವ ಪ್ರಭು.ಬಿ.**
> ಜಿಪಂ ಸಿಇಓ, ವಿಜಯನಗರ




## ಬೆಳಕಿನ ಹಾದಿ

# ಅನುಕರಣೆಯ ಭೂತ

ಒಮ್ಮೆ ಕಪ್ಪೆಯೊಂದು ಮೊದಲ ಸಲ ಟಿ.ವಿ.ಯಲ್ಲಿ ಸಂಗೀತ ಕಾರ್ಯಕ್ರಮವನ್ನು ನೋಡಿತು. ಆಗ ಅದರಲ್ಲಿ ಖ್ಯಾತ ಪಾಪ್ ಗಾಯಕರ ಹಾಡುಗಳು ಪ್ರಸಾರವಾಗುತ್ತಿತ್ತು. ಅವರ ವೇಷ-ಭೂಷಣಗಳು, ಅದರಲ್ಲೂ ವಿಶೇಷವಾಗಿ ಅವರ ಉದ್ದನೆಯ ಕೂದಲು ಕಪ್ಪೆಗೆ ತುಂಬಾ ಇಷ್ಟವಾಯಿತು.



'ಓಹ್! ಎಂತಹ ಸುಂದರ ಕೂದಲು! ಎಷ್ಟೊಂದು ಉದ್ದ ಇವೆ. ನನಗೂ ಅಂತಹ ಉದ್ದನೆಯ ಕೂದಲುಗಳಿದ್ದರೆ ಎಷ್ಟೊಂದು ಚೆನ್ನಾಗಿರುತ್ತಿತ್ತು ಅಲ್ಲವೇ? ಆಗ ಎಲ್ಲರೂ ನನ್ನನ್ನೇ ನೋಡುತ್ತಿದ್ದರು' ಎಂದು ಒಮ್ಮೆ ಕಾಲ್ಪನಿಕ ಲೋಕದಲ್ಲಿ ತೇಲಿತು.

ತಾನು ಕಪ್ಪೆಯಾಗಿದ್ದರಿಂದ ಕೂದಲು ಇರುವುದಿಲ್ಲ ಎಂಬುದು ಅದಕ್ಕೆ ತಿಳಿದಿರಲಿಲ್ಲ. ಸಂಗೀತ ಕಚೇರಿಗಳನ್ನು ನೀಡಿದರೆ ಕೂದಲು ಬೆಳೆಯುತ್ತದೆ ಎಂದು ಕಪ್ಪೆ ತಪ್ಪಾಗಿ ಭಾವಿಸಿತ್ತು. ಅದಕ್ಕಾಗಿ ಒಂದಿಷ್ಟು ರಾಕ್ ಸಾಂಗ್, ಪಾಪ್ ಸಾಂಗ್‌ಗಳನ್ನು ಕಲಿತಿತು. ಜನರು ಹೆಚ್ಚು ಸೇರುವ ಕಡೆಗಳಲ್ಲಿ ಹೋಗಿ ಸಂಗೀತ ಕಛೇರಿ ನೀಡತೊಡಗಿತು. ತನ್ನ ಊರು ಅಲ್ಲದೇ ಬೇರೆ ಬೇರೆ ಊರುಗಳಿಗೂ ಹೋಗಿ ಸಂಗೀತ ಕಾರ್ಯಕ್ರಮ ನೀಡಿತು. ಅಂತೆಯೇ ನಗರಗಳಿಗೂ ಹೋಗಿ ಅಲ್ಲಿಯೂ ಕಾರ್ಯಕ್ರಮ ನೀಡಲು ಪ್ರಾರಂಭಿಸಿತು. ಪಾರ್ಕ್‌ಗಳು, ಫುಟ್‌ಪಾತ್‌ಗಳು, ಬೀಚ್‌ಗಳು, ಬಸ್ ಮತ್ತು ರೈಲು ನಿಲ್ದಾಣಗಳಲ್ಲಿ ಹಾಡಿತು. ಆದರೂ ಒಂದು ಕೂದಲೂ ಬೆಳೆಯಲೇ ಇಲ್ಲ. ಇದರಿಂದ ಕಪ್ಪೆ ಚಿಂತೆಗೆ ಒಳಗಾಯಿತು.

ಆದರೂ ಹಾಡುವುದನ್ನು ನಿಲ್ಲಿಸಲಿಲ್ಲ. ಸಣ್ಣ ಸಣ್ಣ ಅಂಗಡಿಗಳಿಗೆ ಹೋಗಿ ಹಾಡಲು ಪ್ರಾರಂಭಿಸಿತು. ಒಂದು ದಿನ ಹೇರ್ ಕಟಿಂಗ್ ಸಲೂನ್‌ಗೆ ಬಂದು ಹಾಡಲು ಪ್ರಾರಂಭಿಸಿತು. ಕಪ್ಪೆ ಹಾಡುತ್ತಲೇ ಇತ್ತು. ಆಗ ಅಲ್ಲಿದ್ದ ಜನರು ತಮ್ಮದೇ ಆದ ಲೋಕದಲ್ಲಿ ಮುಳುಗಿದ್ದರು. ಯಾರೂ ಕಪ್ಪೆಯ ಕಡೆಗೆ ಗಮನ ಹರಿಸಲೇ ಇಲ್ಲ. ಹೇರ್ ಕಟ್ ಮಾಡುವವರೂ ಕೂಡಾ ತಮ್ಮ ಪಾಡಿಗೆ ತಾವು ಕೆಲಸ ಮಾಡುತ್ತಿದ್ದರು.

ಹೀಗೆ ಕಪ್ಪೆ ಹಾಡುತ್ತಿರುವಾಗ ಒಂದಿಷ್ಟು ಕೂದಲಿನ ತುಂಡುಗಳು ಅದರ ತಲೆಯ ಮೇಲೆ ಬಿದ್ದವು. ಇದನ್ನು ನೋಡಿದ ಕಪ್ಪೆಗೆ ತುಂಬಾ ಖುಷಿಯಾಯಿತು. ತನಗೆ ಕೂದಲು ಬಂದಿತು ಎಂದು ಭಾವಿಸಿತು. ನನ್ನ ಕನಸು ನನಸಾಯಿತು ಎಂದು ಸಂತೋಷದಲ್ಲಿ ಕುಣಿದು ಕುಪ್ಪಳಿಸಿತು. ಉತ್ಸಾಹದಲ್ಲಿ ಮತ್ತಷ್ಟು ಜೋರಾಗಿ ಕುಣಿಯುತ್ತಾ ಹಾಡತೊಡಗಿತು. ಅದೇ ವೇಳೆಗೆ ಕಟಿಂಗ್ ಶಾಪ್‌ನಲ್ಲಿ ಮಲಗಿದ್ದ ಬೆಕ್ಕು ಎಚ್ಚರಗೊಂಡಿತು. ಚಲಿಸುವ ಕೂದಲಿನ ಗುಂಪನ್ನು ನೋಡಿದ ಬೆಕ್ಕು, ಇಲಿ ಎಂದು ಗ್ರಹಿಸಿ ಅದರ ಮೇಲೆ ಎರಗಿತು.

ಹೊಸ ಕೂದಲು ಪಡೆದ ಉತ್ಸಾಹದಲ್ಲಿದ್ದ ಕಪ್ಪೆ ಕ್ಷಣಾರ್ಧದಲ್ಲಿ ಬೆಕ್ಕಿನ ಕಾಲಲ್ಲಿತ್ತು. ಬೆಕ್ಕು ತನ್ನ ಪಾದಗಳಿಂದ ಗಟ್ಟಿಯಾಗಿ ಕಪ್ಪೆಯನ್ನು ಹಿಡಿದುಕೊಂಡು ತಿನ್ನಲು ಬಾಯಿ ಹಾಕಿತು. ಬೆಕ್ಕಿನ ಬಾಯಿಗೆ ತಣ್ಣನೆಯ ಅನುಭವವಾಗಿದ್ದರಿಂದ ಅದನ್ನು ಹೊರಹಾಕಿತ್ತು. ಕಪ್ಪೆಯ ಚರ್ಮವು ತಂಪಾಗಿದ್ದು ದಪ್ಪನಾಗಿತ್ತು. ಆದಾಗ್ಯೂ ಬೆಕ್ಕಿನ ದಾಳಿಗೆ ಒಳಗಾಗಿದ್ದ ಕಪ್ಪೆಯ ಮೈಮೇಲೆ ಗಾಯದ ಗುರುತುಗಳಾಗಿದ್ದವು. ಆದರೆ ಪ್ರಾಣಾಪಾಯದಿಂದ ಪಾರಾಗಿತ್ತು. ಇದರಿಂದ ತಾನು ಕಪ್ಪೆಯಾಗಿಯೇ ಇರಬೇಕೆಂಬ ಪಾಠ ಕಲಿಯಿತು. ನಮ್ಮ ಜೀವನವೂ ಸಹ ಹೀಗೆ ಅಲ್ಲವೇ? ಇನ್ನೊಬ್ಬರನ್ನು ಅನುಕರಣೆ ಮಾಡಲು ಹೋಗಿ ನಮ್ಮ ಜೀವವನ್ನೇ ಹಾಳುಮಾಡಿಕೊಳ್ಳುವುದೇಕೆ?

**। ಆರ್.ಬಿ.ಗುರುಬಸವರಾಜ**

# ವರ್ಷದ ಮೊದಲ ಹಬ್ಬ... ಯುಗಾದಿ

ಎಲ್ಲೆಲ್ಲಿಯೂ ಹಬ್ಬ ಹಬ್ಬ ... ಬಂತು ಯುಗಾದಿ ಹಬ್ಬ ಎಂಬ ಹಾಡು ಮನೆ ಮನೆಗಳಲ್ಲಿಯೂ ಅನುರಣಿಸುವ ಸಮಯವಿದು.

**ಯುಗ ಯುಗಾದಿ ಕಳೆದರೂ**
**ಯುಗಾದಿ ಮರಳಿ ಬರುವುದು**
**ಹೊಸ ವರುಷಕೆ ಹೊಸ ಹರುಷವ**
**ಹೊಸತು ಹೊಸತು ತರುವುದು**

ಎಂಬ ಬೇಂದ್ರೆ ಅಜ್ಜನವರ ಕವನ ಯುಗಾದಿಯ ಮಹತ್ವವನ್ನು ಸಾರಿ ಸಾರಿ ಹೇಳುತ್ತದೆ. ಯುಗಾದಿ ಎಂದರೆ ವಸಂತಕಾಲ. ಯುಗಾದಿ ಎಂದರೆ ಚೈತ್ರ ಮಾಸದ ಆರಂಭದ ಮೊದಲ ಹಬ್ಬ. ಇಡೀ ಪ್ರಕೃತಿಯೇ ಈ ಹಬ್ಬಕ್ಕೆ ಸಜ್ಜಾಗುತ್ತದೆ. ಚಳಿಗಾಲದಲ್ಲಿ ತನ್ನ ಹಳೆಯ ಎಲೆಗಳನ್ನೆಲ್ಲ ಉದುರಿಸಿಕೊಂಡು ಬೋಳಾಗಿರುತ್ತಿದ್ದ ಮರಗಳೆಲ್ಲ ಎಳೆಯ ಹಚ್ಚ ಹಸಿರಿನ ಎಲೆಗಳನ್ನು ತನ್ನದಾಗಿಸಿಕೊಂಡು, ಎಳೆಯ ಕಾಯಿ, ಹಣ್ಣುಗಳು ಬಿಡುವ ಸಮಯ. ಮಾವಿನಲ್ಲಿ ಚಿಗುರೆಲೆಗಳು ಬೇವಿನಲ್ಲಿ ಹೂವುಗಳು ಮೂಡುವ ಈ ಸಮಯದಲ್ಲಿ ಇಡೀ ಪ್ರಕೃತಿಯೇ ಮೈ ಮರೆಸುವ ಸೌಂದರ್ಯಧಾರೆ ಇಳಿದು ಬಂದಂತೆ ಹಸಿರು ಸೀರೆಯುಟ್ಟು ಯುಗಾದಿ ಹಬ್ಬವನ್ನು ಆಚರಿಸಲು ಸಜ್ಜಾಗಿ ನಿಂತಂತೆ ಕಾಣುತ್ತದೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಯುಗಾದಿ ಹಳ್ಳಿಗರ ಭಾಷೆಯಲ್ಲಿ ಉಗಾದಿ ಹಬ್ಬ.... ಯುಗದ ಅಂದರೆ ವರ್ಷದ ಮೊದಲ ಹಬ್ಬ. ನಮ್ಮ ಭಾರತೀಯರ ಹೊಸ ವರ್ಷದ ಸಂಭ್ರಮದ ಹಬ್ಬ. ಪೌರಾಣಿಕವಾಗಿಯೂ ಕೂಡ ಯುಗಾದಿ ಹಬ್ಬವು ಮಹತ್ವವನ್ನು ಪಡೆದಿದೆ. ರಾವಣನನ್ನು ವಧಿಸಿ ಸೀತಾ ಮಾತೆಯ ಸಮೇತ ಪ್ರಭು ಶ್ರೀ ರಾಮನು ದೀಪಾವಳಿಯ ದಿನ ಅಯೋಧ್ಯೆಗೆ ಆಗಮಿಸಿದ ನಂತರ ಚೈತ್ರ ಮಾಸದ ಯುಗಾದಿ ಪಾಡ್ಯದ ದಿನದಂದು ಅಯೋಧ್ಯೆಯ ರಾಜನಾಗಿ ಪಟ್ಟಾಭಿಷಿಕ್ತನಾದ ದಿನವಿದು.

ಮಹಾಭಾರತದಲ್ಲಿ ಚೇದಿ ರಾಜ ವಸುವಿನ ತಪಸ್ಸಿಗೆ ಮೆಚ್ಚಿ ದೇವೇಂದ್ರನು ಆತನಿಗೆ ವೈಜಯಂತಿ ಮಾಲೆಯನ್ನು ನೀಡಿದ ಮತ್ತು ಆತನಿಗೆ ಚಿನ್ನದ ಕಲಶವುಳ್ಳ ಚಕ್ರಾಧಿಪತ್ಯದ ಧ್ವಜವನ್ನು ದಯಪಾಲಿಸಿದನು.

ಜೊತೆಗೆ ದಕ್ಷಿಣ ಭಾರತವನ್ನು ಆಳಿದ ಶಾಲಿವಾಹನ ಎಂಬ ಅರಸನು ಈ ದಿನ ಪಟ್ಟಾ ಬಿಷಿಕ್ತನಾದ ನಂತರ ಆತನ ಹೆಸರಿನಲ್ಲಿಯೇ ಪ್ರತಿ ವರ್ಷದಯುಗಾದಿ ಪಾಡ್ಯದ ದಿನದಂದು ಸಂವತ್ಸರ ಬದಲಾವಣೆಯನ್ನು 'ಶಾಲಿವಾಹನ ಶಕೆ' ಎಂದು ಗುರುತಿಸುವರು.

ಹಬ್ಬವೆಂದರೆ ಕೇಳಬೇಕೆ? ಹಬ್ಬಕ್ಕೆ ಹಲವಾರು ದಿನಗಳ ಮೊದಲೇ ಇಡೀ ಮನೆಯನ್ನು ಸ್ವಚ್ಛಗೊಳಿಸಿ ಸುಣ್ಣ ಬಣ್ಣದ ಸಾರಣೆ ಮಾಡಿ ಹಾಸಿಗೆಗಳನ್ನು ಒಗೆದು ಹಾಕಿ ಪಾತ್ರೆ ಪಗಡಿಗಳನ್ನು ಮತ್ತೊಮ್ಮೆ ತೊಳೆದು ಓರಣವಾಗಿ ಹೊಂದಿಸಿ ಇಟ್ಟುಕೊಳ್ಳುವ ನಮ್ಮ ಹೆಣ್ಣು ಮಕ್ಕಳು ಹಬ್ಬಕ್ಕೆಂದೇ ವಿಶೇಷವಾಗಿ ಮಾವಿನ ತೋರಣ, ಹೂಗಳ ಮಾಲೆಗಳನ್ನು ತಯಾರಿಸಿ ಮನೆಯ ತಲೆಬಾಗಿಲಿಗೆ, ದೇವರ ಕೋಣೆಯ ಬಾಗಿಲಿಗೆ ಕಟ್ಟುತ್ತಾರೆ.

ಹಬ್ಬಕ್ಕೆ ಒಂದೆರಡು ದಿನಗಳ ಮೊದಲು ಬೇವು ಬೆಲ್ಲದ ಪುಡಿಯನ್ನು ತಯಾರಿ ಮಾಡಿಕೊಳ್ಳುತ್ತಾರೆ. ಮುಖ್ಯವಾಗಿ ಈ ಬೇವಿನ ಪುಡಿಗೆ ಬೇಕಾಗುವುದು ಪುಟಾಣಿ, ಬೆಲ್ಲ ಇಲ್ಲವೇ ಸಕ್ಕರೆ. ಗೋಡಂಬಿ, ಕೇರಬೀಜ, ದ್ರಾಕ್ಷಿ, ಬಾದಾಮಿ, ಉತ್ತತ್ತಿ, ಚಾರವಾಳ, ಪಿಸ್ತಾ, ಅಕ್ರೋಟ್ ಕಸಕಸೆ ಮತ್ತು ಕೊಬ್ಬರಿಯ ಪುಡಿಗಳನ್ನೂ ಮಂದ ಉರಿಯಲ್ಲಿ ಹುರಿದು ತಣ್ಣಗಾದ ನಂತರ ಪುಡಿ ಮಾಡಿಕೊಂಡು ಇಲ್ಲವೇ ಸಣ್ಣಗೆ ಹೆಚ್ಚಿಕೊಂಡು ಪುಟಾಣಿಹಿಟ್ಟು ಸಕ್ಕರೆ ಇಲ್ಲವೇ ಪುಟಾಣಿ ಹಿಟ್ಟು ಬೆಲ್ಲದ ಮಿಶ್ರಣಕ್ಕೆ ಸೇರಿಸುತ್ತಾರೆ. ಈ ಎಲ್ಲ ಮಿಶ್ರಣಕ್ಕೆ ಏಲಕ್ಕಿ ಪುಡಿ ಹಾಕಿದರೆ ಬೇವಿನ ಪುಡಿ/ಹುಡಿ ತಯಾರು. ಹಬ್ಬದ ದಿನ ಮುಂಜಾನೆ ಬೇವಿನ ಮರದಲ್ಲಿಯ ಹೂಗಳನ್ನು ಹರಿದು ತಂದು ಅವುಗಳನ್ನು ಮರದಲ್ಲಿ ಹಾಕಿ ಚೆನ್ನಾಗಿ ಒತ್ತಿ ಚಪ್ಪರಿಸಿ ಹೂವಿನ ಎಸಳುಗಳನ್ನು ಮಾತ್ರ ಬೇರ್ಪಡಿಸಿ ಈ ಪುಡಿಯ ಮಿಶ್ರಣಕ್ಕೆ ಕಲಸಿದರೆ ಸಂಪೂರ್ಣವಾಗಿ ಬೇವು ತಯಾರಾಗುತ್ತದೆ.



ಯುಗಾದಿ ಅಮಾವಾಸ್ಯೆಯ ದಿನ ಪೂಜೆ ಮಾಡಿದ ನಂತರ ಹೋಳಿಗೆಯ ಇಲ್ಲವೇ ಬೆಲ್ಲದ ಬೇಳೆಯ ಅಡುಗೆ ತಯಾರಾದರೆ ಮರುದಿನ ಮುಂಜಾನೆ ಎಲ್ಲರೂ ಎಣ್ಣೆ ಹಚ್ಚಿಸಿಕೊಂಡು ಬೇವಿನ ಸೊಪ್ಪನ್ನು ಹಾಕಿ ಕಾಯಿಸಿದ ನೀರಿನಲ್ಲಿ ಅಭ್ಯಂಗ ಸ್ನಾನವನ್ನು ಮಾಡುತ್ತಾರೆ. ದೇವರ ಪೂಜೆಯ ನಂತರ ಮನೆಯ ಹೆಣ್ಣು ಮಕ್ಕಳಿಂದ ಪುರುಷರು ಆರತಿ ಮಾಡಿಸಿಕೊಂಡು ಆರತಿಯ ತಟ್ಟೆಗೆ ದುಡ್ಡು, ಸೀರೆ, ಅನುಕೂಲ ಪರಿಸ್ಥಿತಿ ಇದ್ದರೆ ಒಡವೆಗಳನ್ನು ತಮ್ಮ ಮನೆಯ ಹೆಣ್ಣು ಮಕ್ಕಳಿಗೆ ನೀಡುವುದು ಉಂಟು.ಶಾವಿಗೆ ಪಾಯಸದ ಜೊತೆಗೆ ಸಕ್ಕರೆಯಲ್ಲಿ ತಯಾರಿಸಿದ ಬೇವಿನ ಪುಡಿಗೆ ತುಪ್ಪ ಹಾಕಿ ದೇವರಿಗೆ ನೈವೇದ್ಯ ಮಾಡಿದ ನಂತರ ಪ್ರಸಾದವನ್ನು ಸ್ವೀಕರಿಸುವರು. ಮುಂಜಾನೆ ಶಾವಿಗೆ ಬೇವಿನ ಸಿಹಿಯ ಜೊತೆ ತಿಂಡಿಯನ್ನು ತಿಂದರೆ ಮಧ್ಯಾಹ್ನಕ್ಕೆ ಮತ್ತೆ ಬೇಳೆ ಹೋಳಿಗೆ, ಕೋಸಂಬರಿ ಮತ್ತು ನೀರು ಬೇವಿನ ಭೂರಿ ಭೋಜನ. ಪುಟಾಣಿ ಮತ್ತು ಬೆಲ್ಲದ ಜೊತೆ ವಿವಿಧ ಒಣ ಹಣ್ಣುಗಳನ್ನು ಹಾಕಿ ತಯಾರಿಸಿದ ಬೇವಿನ ಪುಡಿಗೆ ಹುಣಸೆ ಹಣ್ಣು ಕಿವುಚಿ ರಸ ತೆಗೆದು ನೀರು ಕಲಸಿ ಮಾವಿನ ಕಾಯಿಯ ತುರಿ ಉಪ್ಪು ಬೆಲ್ಲ ಹಾಕಿ ತಯಾರಿಸಿದ ಬೇವು ಮತ್ತು ಬೆಲ್ಲದ ರಸಾಯನ ಹೋಳಿಗೆಯೊಂದಿಗೆ ತಿಂದರೆ ಆಹಾ!! ಸ್ವರ್ಗಕ್ಕೆ ಎರಡೇ ಗೇಣು! ಇದರ ಜೊತೆಗೆ ಹಪ್ಪಳ ಸಂಡಿಗೆ ಕರಿದ ಮೆಣಸಿನಕಾಯಿ ಬಾಳಕಗಳು ಹೋಳಿಗೆ ಸಾರು, ಅನ್ನ ಮತ್ತು ಈರುಳ್ಳಿ ಬಜ್ಜಿ ಮತ್ತು ಮೆಣಸಿನ ಕಾಯಿ ಬಜ್ಜಿಗಳು ಇದ್ದರೆ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ..!! ಎಂದು ಹೇಳಬಹುದು.

ಈ ಹೋಳಿಗೆ ಮತ್ತು ಬೇವಿನ ಆಹಾರದಲ್ಲಿಯೂ ವೈಜ್ಞಾನಿಕ ಸತ್ಯ ಅಡಗಿದೆ. ಚಳಿಗಾಲದ ದಿನಗಳು ಮುಗಿದು ಬೇಸಿಗೆಯ ಬಿಸಿಲಿನ ವಾತಾವರಣಕ್ಕೆ ಪೂರಕವಾಗಿ ದೇಹವು ಹೊಂದಿಕೊಳ್ಳಲು ಮತ್ತು ಸಾಂಕ್ರಾಮಿಕ ರೋಗಗಳಿಂದ ಪಾರಾಗಲು ಬೇವಿನ ಎಲೆಯನ್ನು ಹಾಕಿ ಕಾಯಿಸಿದ ನೀರಿನಿಂದ ಸ್ನಾನ ಮಾಡುವುದರಿಂದ ದೇಹವು ಉಷ್ಣತೆಯನ್ನು ಕಳೆದುಕೊಳ್ಳುತ್ತದೆ ಮತ್ತು ಹೆಚ್ಚಿನ ರೋಗ ನಿರೋಧಕ ಶಕ್ತಿಯನ್ನು ಹೊಂದುತ್ತದೆ. ಇನ್ನು ಕೋಸಂಬರಿಯು ಊಟದ ರುಚಿಯನ್ನು ಹೆಚ್ಚಿಸಿದರೆ ಬೇಳೆ ಮತ್ತು ಬೆಲ್ಲದ ಹೋಳಿಗೆಗಳು ದೇಹದಲ್ಲಿನ ಪಿತ್ತ ಪ್ರಕೃತಿಯನ್ನು ಶಾಂತವಾಗಿಸಿ ಕಬ್ಬಿಣದ ಅಂಶವನ್ನು ಹೆಚ್ಚಿಸುತ್ತವೆ. ಬೇಳೆಯಲ್ಲಿರುವ ಪ್ರೋಟೀನ್ ಮತ್ತು ಬೇವಿನ ರಸಾಯನಕ್ಕೆ ಹಾಕಿದ ಒಣ ಹಣ್ಣು ಮತ್ತಿತರ ಸಾಮಗ್ರಿಗಳು ದೇಹದ ಚೈತನ್ಯ ಶಕ್ತಿಗೆ ಪೂರಕವಾಗುವ ಆಹಾರಗಳಾಗಿದ್ದು ಇಡೀ ಬೇಸಿಗೆ ಕಾಲವನ್ನು ಆರೋಗ್ಯವಾಗಿ ಮತ್ತು ಆಹ್ಲಾದಕರವಾಗಿ ಕಳೆಯಲು ಅತ್ಯುತ್ತಮ ಆಹಾರಗಳು.

ಹಬ್ಬದ ದಿನದಂದು ಹೊಸ ಬಟ್ಟೆಯನ್ನು ಎಲ್ಲರೂ ಧರಿಸುತ್ತಾರೆ. ಶುಭಕಾರ್ಯಗಳಿಗೆ ಕೂಡ ಯುಗಾದಿ ಪ್ರಶಸ್ತವಾದ ದಿನ. ಈ ದಿನ ಕಟ್ಟಡಗಳ ಪ್ರಾರಂಭೋತ್ಸವ, ಹೊಸ ಮನೆಗೆ ಬಾಗಿಲನ್ನಿಡುವುದು, ಗೃಹಪ್ರವೇಶ ಮತ್ತಿತರ ಶುಭ ಸಮಾರಂಭಗಳನ್ನು ಕೈಗೊಳ್ಳಬಹುದು. ರೈತರು ಕೂಡ ತಮ್ಮ ದನಕರುಗಳ ಮೈ ತೊಳೆದು ಅಲಂಕರಿಸಿ ಪೂಜಿಸುತ್ತಾರೆ. ಹೊಲಗಳಿಗೆ ತೆರಳಿ ಭೂಮಿ ತಾಯಿಯ ಪೂಜೆ ನೆರವೇರಿಸಿ ನೈವೇದ್ಯ ಮಾಡುತ್ತಾರೆ.

ಸಾಯಂಕಾಲಗಳಲ್ಲಿ ಆಯಾ ಊರುಗಳಲ್ಲಿ ನಡೆಯುವ ವಿವಿಧ ದೇವಸ್ಥಾನಗಳಲ್ಲಿ ಮತ್ತು ವಿಶೇಷವಾಗಿ ಹನುಮನ ದೇಗುಲಗಳಲ್ಲಿ ವಿಶೇಷ ಪೂಜೆ, ಪುನಸ್ಕಾರ, ರಥ ಯಾತ್ರೆ ಗಳಲ್ಲಿ ಪಾಲ್ಗೊಂಡು ಪಾನಕ ಕೋಸಂಬರಿಯ ಪ್ರಸಾದವನ್ನು ಸ್ವೀಕರಿಸಿ ಪಂಚಾಂಗ ಶ್ರವಣವನ್ನು ಮಾಡಿದರೆ ಹಬ್ಬ ಸಂಪೂರ್ಣವಾದಂತೆ. ವಿವಿಧ ದೇವಸ್ಥಾನಗಳಲ್ಲಿ ಹೊಸ ಪಂಚಾಂಗವನ್ನು ಅಂದಿನ ದಿನ ಪಠಣ ಮಾಡುತ್ತಾ ಆ ವರ್ಷದ ಮಳೆ, ಬೆಳೆ, ಮುಂದಿನ ದಿನಮಾನಗಳಲ್ಲಿ ನಡೆಯುವ ವಿಷಯಗಳ ಅರಿವನ್ನು ಪಂಚಾಂಗ ಶ್ರವಣದ ಮೂಲಕ ಹೊಂದುವುದು ಯುಗಾದಿ ಹಬ್ಬದ ಅತ್ಯಂತ ವಿಶೇಷವಾದ ಕಾರ್ಯಕ್ರಮ.

ಯುಗಾದಿ ಹಬ್ಬವು ವರ್ಷದ ಮೊದಲ ಹಬ್ಬ.... ಈ ದಿನದಂದು ನಾವು ಬೇವು ಬೆಲ್ಲವನ್ನು ಸೇವಿಸುತ್ತಾ ಜೀವನದಲ್ಲಿ ಬರುವ ಸುಖ ದುಃಖ, ನೋವು ನಲಿವನ್ನು ಸಮಚಿತ್ತದಿಂದ ಸ್ವೀಕರಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಈ ಹಬ್ಬವು ಕಲಿಸಿಕೊಡುತ್ತದೆ. ಬೇವಿನ ಕಹಿಯ ಜೊತೆ ಬೆಲ್ಲದ ಸಿಹಿಯು ಬೆರೆತರೆ ಬಾಳು ಸಮರಸವಾಗುವುದು ಎಂಬ ಬದುಕಿನ ಬಲು ದೊಡ್ಡ ಪಾಠ ನಮಗೆ ವರ್ಷದ ಮೊದಲ ಹಬ್ಬದಲ್ಲಿ ದೊರೆಯುತ್ತದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com M: 9448633038

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES



# ಡಾ.ಮೇತ್ರಿ ವಿರುದ್ಧ ಕ್ರಮಕ್ಕೆ ಆಗ್ರಹ

## ಸುಳ್ಳು ಜಾತಿ ಪ್ರಮಾಣ ಪತ್ರ । ಕಾಲಮಿತಿಯೊಳಗೆ ತನಿಖೆಗೆ ಒತ್ತಾಯ

■ **ಹಂಪಿ ಟೈಮ್ಸ್ ಹೊಸಪೇಟೆ**



ಸುಳ್ಳು ಪ್ರಮಾಣ ಪತ್ರ ಪಡೆದು ಕನ್ನಡ ವಿವಿಯಲ್ಲಿ ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟಿದ್ದ ಪ್ರವಾಚಕ (ರೀಡರ್) ಹುದ್ದೆ ಪಡೆದು, ಉದ್ಯೋಗದಲ್ಲಿ ಬಡ್ತಿ ಮತ್ತು ಅನೇಕ ಆರ್ಥಿಕ ಸೌಲಭ್ಯಗಳನ್ನು ಪಡೆದು ಸರ್ಕಾರ ಮತ್ತು ಎಸ್ಟಿ ಸಮುದಾಯಕ್ಕೆ ವಂಚಿಸಿರುವ ಬಳ್ಳಾರಿ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದ ಡಾ.ಕೆ.ಎಂ.ಮೇತ್ರಿ ಅವರ ವಿರುದ್ಧ ಸೂಕ್ತ ತನಿಖೆ ನಡೆಸಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕೆಂದು ಆಗ್ರಹಿಸಿ ದಲಿತ ಹಕ್ಕುಗಳ ಸಮಿತಿ ಕರ್ನಾಟಕ ಹೊಸಪೇಟೆ ತಾಲೂಕು ಸಮಿತಿ ಪದಾಧಿಕಾರಿಗಳು ಸೋಮವಾರ ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಸಂಘಟನೆಯ ಜಿಲ್ಲಾಧ್ಯಕ್ಷ ಮರಡಿ ಜಂಬಯ್ಯನಾಯ್ಕ ಮಾತನಾಡಿ, ಹಿಂದೂಧನಗರ ಜಾತಿಗೆ ಸೇರಿದ್ದರೂ ಸಹ ಪರಿಶಿಷ್ಟ ಪಂಗಡದ ಗೊಂಡ ಜಾತಿಯ ಸುಳ್ಳು ಪ್ರಮಾಣ ಪತ್ರ ಪಡೆದಿರುವ ಡಾ.ಕೆ.ಎಂ.ಮೇತ್ರಿಯವರ ಕುಲಪತಿ ಹುದ್ದೆಯ ಆದೇಶವನ್ನು ರಾಜ್ಯ ಸರ್ಕಾರ ಹಿಂದಕ್ಕೆ ಪಡೆದಿದೆ. ರಾಜ್ಯದಲ್ಲಿ ಎಸ್.ಸಿ., ಎಸ್.ಟಿ. ಸಮುದಾಯಗಳಿಗೆ ಸಂವಿಧಾನ ನೀಡಿದ ಉದ್ಯೋಗ, ಶಿಕ್ಷಣ, ಆರ್ಥಿಕ ಮೀಸಲಾತಿಗಳನ್ನು ಇತರೆ ಜಾತಿಗಳು ಕಬಳಿಸುತ್ತಿರುವುದು ಸರ್ಕಾರದ ಅಂಕಿ ಅಂಶಗಲೇ ದೃಢಪಡಿಸುತ್ತಿವೆ. ತಪ್ಪು ಮಾಡಿದವರಿಗೆ ತಕ್ಕ ಶಿಕ್ಷೆಯಾಗದಿರುವುದಕ್ಕೆ ಪ್ರಕರಣಗಳು ಮರುಕಳಿಸುತ್ತಿವೆ. ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಕೂಡಲೇ ಕ್ರಮಕೈಗೊಳ್ಳಬೇಕು. ಕಾಲಮಿತಿಯಲ್ಲಿ ತನಿಖೆ ಯಾಗಬೇಕು. ಸರ್ಕಾರಕ್ಕೆ ವಂಚಿಸಿದವರ ಆಸ್ತಿಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕು. ಸುಳ್ಳು, ಜಾತಿ ಪ್ರಮಾಣ ಪತ್ರವನ್ನು ನೀಡಿದ ಅಧಿಕಾರಿಗಳನ್ನು ಅವರ ಹುದ್ದೆಯಿಂದ ವಜಾ ಮಾಡಬೇಕು. ತನಿಖೆ ವಿಳಂಬ ಮಾಡುವ ಮತ್ತು ಸಹಕಾರ ನೀಡದ ಅಧಿಕಾರಿಗಳ ಮೇಲೂ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸಂಘಟನೆಯ ಜಿಲ್ಲಾ ಉಪಾಧ್ಯಕ್ಷ ಬಿ.ತಾಯಪ್ಪ ನಾಯಕ, ತಾಲೂಕಧ್ಯಕ್ಷ ಎಂ.ಧನ್‌ರಾಜ್, ಕಾರ್ಯದರ್ಶಿ ಬಿ.ರಮೇಶ ಕುಮಾರ್, ಉಪಾಧ್ಯಕ್ಷ ಹೆಚ್.ಹನುಮಂತಪ್ಪ, ಸಂಘಟನಾ ಕಾರ್ಯದರ್ಶಿ ಸೂರ್ಯನಾರಾ ಯಣ ಮಾದಿಗ, ಉಪಾಧ್ಯಕ್ಷ ಬಿ.ಸೂರ್ಯಕಿರಣ ಇತರರು ಇದ್ದರು.

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ಕ್ರೋಧಿ

**09-04-2024 – ಮಂಗಳವಾರ**

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಶುಕ್ಲ |
| ನಕ್ಷತ್ರ | : ರೇವತಿ |
| ಯೋಗ | : ವೈಧೃತಿ |
| ಕರಣ | : ಕಿಂಸ್ತುಘ್ನ |
| ಸೂರ್ಯೋದಯ | : 06:12:41 |
| ಸೂರ್ಯಾಸ್ತ | : 18:44:21 |
| ರಾಹು | : 15:36–17:10 |
| ಯಮಘಂಡ | : 09:21–10:55 |
| ಗುಳಿಕ | : 12:29–14:02 |

## ತುಂಗಭದ್ರಾ ನೀರಿನ ಮಟ್ಟ



ಸೋಮವಾರ : 08-04-2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1579.25 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 931 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 4.117 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1587.37 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 3978 ಕ್ಯುಸೆಕ್ |
| ಸಾಮರ್ಥ್ಯ | 4.173 ಟಿಎಂಸಿ |

# ಸೂಕ್ತ ದಾಖಲೆ ಇಲ್ಲದ ರೂ.5.60 ಕೋಟಿ ನಗದು, ಚಿನ್ನಾಭರಣ ವಶ

**ಹಂಪಿ ಟೈಮ್ಸ್ ಬಳ್ಳಾರಿ**

ನಗರ ವ್ಯಾಪ್ತಿಯಲ್ಲಿ ಸೂಕ್ತ ದಾಖಲೆ ಇಲ್ಲದ ರೂ.5.60 ನಗದು, 3 ಕೆ.ಜಿ ಚಿನ್ನ (ಅಂದಾಜು ರೂ.1.40 ಕೋಟಿ ಮೌಲ್ಯ), 68 ಕೆ.ಜಿ ಬೆಳ್ಳಿ (ರೂ.21.50 ಲಕ್ಷ ಮೌಲ್ಯ), 103 ಕೆ.ಜಿ ಹಳೆ ಬೆಳ್ಳಿ (ರೂ.20.50 ಲಕ್ಷ ಮೌಲ್ಯ) ಭಾನುವಾರ ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಅಬಕಾರಿ ಪೊಲೀಸ್ ಅಧಿಕಾರಿಗಳಿಂದ 21.28 ಲೀಟರ್ (ರೂ.8700 ಮೌಲ್ಯ) ಮದ್ಯ ಮತ್ತು ಪೊಲೀಸ್ ಇಲಾಖೆ ಅಧಿಕಾರಿಗಳಿಂದ 11.70 ಲೀಟರ್ (ರೂ.7222 ಮೌಲ್ಯ) ಮದ್ಯ ಸೇರಿದಂತೆ ಒಟ್ಟು 32.98 ಲೀಟರ್ ಮದ್ಯ (ರೂ.15,922 ಮೌಲ್ಯ) ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದು, ಒಟ್ಟು 2 ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

# ಏ.14 ರಂದು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ 134ನೇ ಜಯಂತಿ: ಸರಳ ಆಚರಣೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಸಮಾಜ ಕಲ್ಯಾಣ ಇಲಾಖೆ ಇವರ ವತಿಯಿಂದ ಭಾರತ ರತ್ನ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 134 ನೇ ಜಯಂತಿ ಕಾರ್ಯಕ್ರಮವನ್ನು ಲೋಕಸಭೆ ಸಾರ್ವತ್ರಿಕ ಚುನಾವಣೆ ಅಂಗವಾಗಿ ಮಾದರಿ ನೀತಿ ಸಂಹಿತೆ ಜಾರಿಯಿರುವ ಹಿನ್ನಲೆಯಲ್ಲಿ ಏ.14 ರಂದು ಬೆಳಿಗ್ಗೆ 09 ಗಂಟೆಗೆ ನಗರದ ಮೊದಲನೇ ಗೇಟ್ ಬಳಿಯ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡುವುದರ ಮೂಲಕ ಸರಳ ಮತ್ತು ಸಾಂಕೇತಿಕವಾಗಿ ಆಚರಿಸಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಸತೀಶ್.ಕೆ.ಹೆಚ್ ಅವರು ತಿಳಿಸಿದ್ದಾರೆ.

## ಮತದಾನ ಪ್ರಜಾಪ್ರಭುತ್ವದ ಹೃದಯ ಬಡಿತ

ಕವಿ ಮನಸು

## ಯುಗಾದಿ ಸಂಭ್ರಮ

ಬರುತಿದೆ ಹೊಸ ವರುಷ
ತರುತಿದೆ ನವ ಹರುಷ
ಮನದಲಿ ಮೂಡುತಿದೆ ಉಲ್ಲಾಸ
ಕಾಣುತಿದೆ ಭರವಸೆಯ ಸಂತಸ

ಆಗುತಿದೆ ವಸಂತನ ಆಗಮನ
ಶುರುವಾಯಿತು ನವಿಲಿನ ನರ್ತನ
ಒಡೆದಿದೆ ಗಿಡ ಮರಗಳ ಚಿಗುರು
ಎಲ್ಲೆಡೆ ಹಚ್ಚ ಹಸಿರು

ಹೊಸ ವರುಷದ ಮೊದಲ ದಿನ
ಕ್ರೋಧಿನಾಮ ಸಂವತ್ಸರದ ಶುಭಾಗಮನ
ದೂರವಾಗಲಿ ರೋಗ ರುಜಿನ
ಆರೋಗ್ಯವಾಗಿರಲಿ ನಮ್ಮ ಜನ
ಸರ್ವರಿಗೂ ಇರಲಿ ಸುಖಾ ಶಾಂತಿ
ಅನುದಿನ

ಕಟ್ಟೋಣ ಯುಗಾದಿಯ ತೋರಣ
ಸವಿಯೋಣ ಹೋಳಿಗೆಯ ಹೂರಣ
ಕಳೆಯಲಿ ಎಲ್ಲಾ ದುಃಖ ದುಮ್ಮಾನ
ದೊರೆಯಲಿ ಸಂತೋಷದ ಸನ್ಮಾನ

ಬದುಕಲಿ ಮರೆಯಾಗಲಿ ಕಹಿ
ಇರಲಿ ಸದಾ ಸಿಹಿ
ಯುಗಾದಿ ಹಬ್ಬದ ಶುಭಾಶಯಗಳು

–ಚೇತನ ಭಾರ್ಗವ

## ಯುಗಾದಿಯ ಕಳೆ ಮಾಯವಾಗಿದೆ

ಮರ ಗಿಡಗಳಲ್ಲಿ ಚಿಗುರು ಕಾಣುತ್ತಿಲ್ಲ
ಹೂ ಹಣ್ಣುಗಳ ಸುವಾಸನೆ
ಬರುತ್ತಿಲ್ಲ
ಪ್ರಕೃತಿಯ ಹಸಿರು
ಇಲ್ಲವಾಗಿದೆಯಲ್ಲ
ಯುಗಾದಿಯ ಕಳೆ
ಮಾಯವಾಗಿದೆ

ಬಿಸಿಲದಗೆ ಹೆಚ್ಚಾಗುತ್ತಿದೆಯಲ್ಲ
ಜೀವಿಗಳ ಬಳಲಿಕೆ
ಕಾಣುತ್ತಿದೆಯಲ್ಲ
ಉಸಿರಾಟದ ಸಮಸ್ಯೆ
ಕಾಡುತಿದೆಯಲ್ಲ
ಯುಗಾದಿಯ ಕಳೆ
ಮಾಯವಾಗಿದೆಯಲ್ಲ

ಪುಟ್ಟಪುಟ್ಟಜೀವಗಳ
ನರಳುತಿದೆಯಲ್ಲ
ದೊಡ್ಡ ಪ್ರಾಣಿಗಳು ಜೀವ
ಬಿಡುತಿದೆಯಲ್ಲ
ಉಸಿರಾಟದ ಸಮಸ್ಯೆ
ಕಾಡುತಿದೆಯಲ್ಲ
ಯುಗಾದಿಯ ಕಳೆ
ಮಾಯವಾಗಿದೆಯಲ್ಲ

ಹಿರಿ ಜೀವಿಗಳು ಕಂದಮ್ಮಗಳು
ಗೋಳಾಡುತ್ತಿದೆಯಲ್ಲಾ
ಜೀವ ಜಲ ಬತ್ತುತ್ತಿದೆಯಲ್ಲ
ತಂಪಾದ ಗಾಳಿ ಬಿಸುತ್ತಿಲ್ಲವಲ್ಲ
ಯುಗಾದಿಯ ಕಳೆ
ಮಾಯವಾಗಿದೆಯಲ್ಲ

ಹಬ್ಬ ಬಂತೆಂದು ಹಿಗ್ಗುವಂತಿಲ್ಲ
ಹೋಳಿಗೆ ತುಪ್ಪ ನೆನಪಾಗುತ್ತಿಲ್ಲ
ಬಿಸಿಲಿಗೆ ಜೀವ
ಉಳಿಸಿಕೊಳ್ಳಬೇಕಾಗಿದೆಯಲ್ಲ
ಯುಗಾದಿಯ ಕಳೆ
ಮಾಯವಾಗಿದೆಯಲ್ಲ

– ಜಿ ಆರ್ ಬಸವರಾಜೇಶ್ವರಿ
ಸರ್ಕಾರಿ ಪ್ರೌಢಶಾಲೆ ಹಗರಿಗಜಾಪುರ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಯುಗದ ಆದಿ ಯುಗಾದಿ

ಯುಗಾದಿ ಹಬ್ಬ ಕುರಿತು ಅನೇಕ ಸಾಹಿತಿಗಳು ಲೇಖನ, ಕವಿತೆ ಬರೆಯುತ್ತಲೇ ಇರುತ್ತಾರೆ. ಆದರೂ ಪ್ರತಿ ವರ್ಷ ಬರುವ ಈ ಯುಗಾದಿ ಹಬ್ಬಕ್ಕೆ ಅತೀ ಹೆಚ್ಚು ನೆನಪಾಗುವ ಕವನ ಎಂದರೆ, ವರಕವಿ ಡಾ.ದ. ರಾ. ಬೇಂದ್ರೆ ಅವರು ರಚಿಸಿದ ಕವನ.

**"ಯುಗ ಯುಗಾದಿ ಕಳೆದರೂ**
**ಯುಗಾದಿ ಮರಳಿ ಬರುತಿದೆ**
**ಹೊಸ ವರುಷಕೆ ಹೊಸ ಹರುಷವ**
**ಹೊಸತು ಹೊಸತು ತರುತಿದೆ......"**

ಎಂದೋ ಬರೆದ ಹಾಡು ಇಂದಿಗೂ ಎಂದೆಂದಿಗೂ ನವ ನವೀನವೇ ಹೌದು.

ಜಗತ್ತಿನ ಎಲ್ಲ ದೇಶಗಳಲ್ಲಿ ಅತೀ ಹೆಚ್ಚು ಹಬ್ಬಗಳನ್ನಾಚರಿಸುವ ದೇಶ ನಮ್ಮ ಭಾರತ. ವಿಶೇಷವಾದ ಸಂಸ್ಕೃತಿಯ ನೆಲೆಗಟ್ಟು ಹೊಂದಿರುವ ಈ ದೇಶ. ಅಂದರೆ ವೇದ/ಪುರಾಣಕಾಲದಿಂದಲೂ ಧಾರ್ಮಿಕ ತಳಹದಿಯ ಮಾನವೀಯ ಮೌಲ್ಯಗಳನ್ನು ಬಿತ್ತರಿಸುವ ಆಚಾರ, ವಿಚಾರ ಸಾಂಪ್ರದಾಯಿಕ ಹಬ್ಬ ಹರಿದಿನಗಳೂ ಕಾರಣವೆನ್ನಬಹುದು.


ಪ್ರತೀವರ್ಷ ಹಿಂದು ಪಂಚಾಂಗದ ಪ್ರಕಾರ, ವರ್ಷದ ಕೊನೆಯ ಫಾಲ್ಗುಣ ಮಾಸದಲ್ಲಿ ಬರುವ ಹೋಳಿ ಹಬ್ಬವೇ ಕೊನೆಯ ಹಬ್ಬ. ತದನಂತರ ಆರಂಭವಾಗುವ ಹೊಸ ವರ್ಷದ ಮೊದಲನೇ ತಿಂಗಳಾದ ಚೈತ್ರ ಮಾಸದಲ್ಲಿ ಬರುವ ಯುಗಾದಿ ಅಮವಾಸ್ಯೆ ಮತ್ತು ಮರುದಿನದ ಪ್ರತಿಪದ ಯುಗಾದಿ ಹಬ್ಬ. ವಸಂತಕಾಲದ ಸ್ವಾಗತವೂ ಈ ಹೊಸ ಸಂವತ್ಸರದ ಯುಗಾದಿ ಹಬ್ಬದಿಂದಲೇ ಆರಂಭವಾಗುತ್ತದೆ.



ಲಕುಮಿಸುತ ಸಾರವಾಡ
ಹೊಸಪೇಟೆ, ಮೊ: 9449598373
Scan For Digital Colourful
HAMPI TIMES E-paper

ಹಿಂದು ಪಂಚಾಂಗದ ಪ್ರಕಾರ 'ಯುಗ' ಎಂದರೆ ವರ್ಷ. ಪಂಚ ಭೂತಗಳಾದ ನೀರು, ಅಗ್ನಿ, ಆಕಾಶ, ಭೂಮಿ ಮತ್ತು ವಾಯು ಗಳಿಂದ ಪ್ರಕೃತಿ ಮತ್ತು ಮಾನವನ ಮೂಲ ಉಗಮವೆಂದು ಭಾಗವತ ಪುರಾಣದಲ್ಲಿ ಉಲ್ಲೇಖವುಂಟು. ಈ ಭೂಮಂಡಲವು ಮನುಷ್ಯ, ಪ್ರಾಣಿ, ಕ್ರಿಮಿಕೀಟ ಇತ್ಯಾದಿ ಜಂತುಗಳ ಸೃಷ್ಟಿ ಕರ್ತ ಆ ಬ್ರಹ್ಮದೇವ. ಅವನು ಸೃಷ್ಟಿಸಿದ ಮೊದಲ ದಿನವೇ 'ಆದಿ'. ಬ್ರಹ್ಮ ದೇವನ ಈ ಮೊದಲ ದಿನವನ್ನು ಯುಗ ಮತ್ತು ಆದಿ ಸೇರಿಯೇ 'ಯುಗದ ಅದಿ' ಅರ್ಥಾತ್ ಹೊಸ ವರ್ಷದ ಮೊದಲ ದಿನ ಎಂದು 'ಯುಗಾದಿ ಹಬ್ಬ' ಆಚರಿಸುವ ವಾಡಿಕೆ.

ಪೌರಾಣಿಕ ಹಿನ್ನೆಲೆಯಿಂದ ಯುಗಾದಿ ಹಬ್ಬವನ್ನು ಅವಲೋಕಿಸುವುದಾದಲ್ಲಿ, ಹಿಂದೆ ಸೃಷ್ಟಿಯ ಪೂರ್ವ ಕಾಲದಲ್ಲಿ ಸೋಮಕಾಸುರನೆಂಬ ರಾಕ್ಷಸನು ವೇದಗಳನ್ನು ಕದ್ದೊಯ್ದು ಸಾಗರದಲ್ಲಿ ಅಡಗಿ ಕುಳಿತಾಗ, ಮಹಾ ವಿಷ್ಣು ತನ್ನ ಹತ್ತಾವತಾರದಲ್ಲಿನ ಮೊದಲೇ ಅವತಾರವಾದ ಮತ್ಸ್ಯಾವತಾರ ಧಾರಣ ಮಾಡಿ ಆ ರಾಕ್ಷಸನನ್ನು ಸಂಹರಿಸಿ ವೇದಗಳನ್ನು ಬ್ರಹ್ಮದೇವನಿಗೆ ತಲುಪಿಸಿದ. ಆ ದಿನದಿಂದಲೇ ಬ್ರಹ್ಮದೇವನು ಸೃಷ್ಟಿಯನ್ನು ರಚಿಸಲು ಆರಭಿಸಿದ ಶುಭದಿನ. ನಂತರ ತ್ರೇತಾ ಯುಗದಲ್ಲಿ ವಿಷ್ಣುವಿನ ಅವತಾರಿಯಾದ ಭಗವಾನ್ ಶ್ರೀರಾಮನು ತನ್ನ ವನವಾಸವನ್ನು ಮುಗಿಸಿ ಲಂಕಾಧೀಶನಾದ ರಾವಣನ್ನು ಸಂವರಿಸಿ ಸೀತಾಮಾತೆ, ಲಕ್ಷ್ಮಣ, ಆಂಜನೆಯ ಹಾಗೂ ಇತರರೊಡನೆ ತನ್ನ ರಾಜ್ಯದ ಅಯೋಧ್ಯಗೆ ಬಂದ ದಿನವೆಂದು ಪ್ರತೀತಿ. ಹೀಗೆ ಅನೇಕ ಶುಭದಿನಗಳ ಸಂಕೇತವಾಗಿ ಆಚರಿಸುವ ಹಬ್ಬವೇ ಯುಗಾದಿ ಹಬ್ಬ.




ಯುಗಾದಿ ಹಬ್ಬವನ್ನು ಇಡೀ ಭಾರತವಲ್ಲದೇ ಏಷಿಯಾದ ಇನ್ನು ಕೆಲವು ಭಾಗಗಳಲ್ಲಿ ಕೂಡಾ ಆಚರಿಸುತ್ತಾರೆಂದು ತಿಳಿಯಲ್ಪಡುತ್ತದೆ. ಭಾರತದಲ್ಲಿ ಚಂದ್ರ ಹಾಗೂ ಸೂರ್ಯನ ಚಲನವಲನಗಳನ್ನಾಧರಿಸಿ ತಯಾರಿಸಿದ ಪಂಚಾಂಗ ಪ್ರಕಾರ ಚಾಂದ್ರಮಾನ ಮತ್ತು ಸೌರಮಾನ ಯುಗಾದಿ ಆಚರಿಸಲಾಗುತ್ತದೆ. ಉಡುಪಿ, ಮಂಗಳೂರು ಮತ್ತು ಉತ್ತರ ಭಾರತದ ಹಲವು ಪ್ರದೇಶಗಳಲ್ಲಿ ಸೌರಮಾನ ಯುಗಾದಿಯನ್ನು ಉಳಿದಂತೆ ಬಹತೇಕ ದಕ್ಷಿಣ ಭಾರತದಲ್ಲಿ ಚಾಂದ್ರಮಾನ ಯುಗಾದಿ ಆಚರಿಸಲಾಗುತ್ತದೆ. ನಮ್ಮ ಕರ್ನಾಟಕದಲ್ಲಿ ಮತ್ತು ಅಂದ್ರ, ಮಹಾರಾಷ್ಟ್ರದಲ್ಲಿ ಕೂಡಾ ಚಾಂದ್ರಮಾನ ಯುಗಾದಿಯನ್ನು ಆಚರಿಸುವ ಸಂಪ್ರದಾಯ,

ಅಣ್ಣ–ತಂಗಿ, ಹೆಣ್ಣಿಗೆ ತವರು ಮನೆಯ ಬಾಂಧವ್ಯ ಸೂಚಿಸುವ 'ನಾಗಪಂಚಮಿ', ಕತ್ತಲೆಯಿಂದ ಬೆಳಕಿನೆಡೆಗೆ ಸಾಗಲು ತಿಳಿ ಹೇಳುವ 'ದೀಪಾವಳಿ', ದುಷ್ಟ ಶಕ್ತಿಗಳ ದಮನಕ್ಕಾಗಿ 'ಮಹಾನವಮಿ' ಹಾಗೂ ಶಿವಶಕ್ತಿಯ ಭಕ್ತಿ ಬಿಚ್ಚಿಡುವ 'ಮಹಾಶಿವರಾತ್ರಿ' ಹೀಗೆ ವರ್ಷವಿಡೀ ಬರುವ ಹಬ್ಬಗಳಿಗೆ ಒಂದೊಂದು ಸಂದೇಶ, ಸಂಸ್ಕೃತಿ, ಸಂಪ್ರದಾಯ ಆಚರಣೆ ಇರುವ ಹಾಗೆ ಯುಗಾದಿ ಹಬ್ಬಕ್ಕೂ ತನ್ನದೇ ಆದ ಸಂದೇಶ ಸಂಪ್ರದಾಯದ ಆಚರಣೆಗಳಿವೆ.

ವಸಂತ ಮಾಸದ ಆರಂಭದಲ್ಲಿ ಮೊದಲು ಹಸಿರಾಗಿ ಹೂವು ಬಿಡುವ ಮರವೆಂದರೆ ಬೇವಿನ ಮರ. ಯುಗಾದಿ ಹಬ್ಬಕ್ಕೆ ಒಬ್ಬರಿಗೊಬ್ಬರು 'ಬೇವು–ಬೆಲ್ಲ' ವಿನಿಮಯಿಸುತ್ತ, ಸವಿಯುತ್ತ ಶುಭ ಕೋರುವುದು ಮುಖ್ಯವಾದದ್ದು. ಬೇವು ಎಂದರೆ ಬೇವಿನ ಮರದ ಹೂವು, ಅದು ಸ್ವಲ್ಪ ಕಹಿಯಾಗಿರುತ್ತದೆ. ಬೆಲ್ಲ ಎಂದರೆ ಸಿಯಾಗಿರುತ್ತದೆ. ಈ ಎರಡರ ಮಿಶ್ರಣ ಸವಿಯುವುದು ಎಂದರೆ ಬದುಕಿನಲ್ಲಿ ಬರುವ ಕಷ್ಟ–ಸುಖಗಳನ್ನು ಸಮನಾದ ಮನೋಭಾವದಿಂದ ಸ್ವೀಕರಿಸಿ ಬಾಳುವುದು ಎಂಬ ಸಂದೇಶ.

ಮನುಷ್ಯ ಅದೆಷ್ಟೇ ಐಷಾರಮಿ ಜೀವನ ಸಾಗಿಸುತ್ತಿದ್ದರೂ, ಮದ್ಯಮ/ಸಾಮನ್ಯ ಬಡವನಾಗಿದ್ದರೂ ಕಷ್ಟ ಸುಖ ಎರಡೂ ಇದ್ದೇ ಇರುತ್ತವೆ. ಸುಖ ಬಂದಾಗ ಸಂತೋಷ ಮತ್ತು ಕಷ್ಟ ಬಂದಾಗ ಕೊರಗುವುದು ಬೇಡ. ಎಲ್ಲವನ್ನೂ ಸಮಾನಾಗಿ ಸ್ವೀಕರಿಸಿ ಆದದ್ದೆಲ್ಲ ಒಳಿತಕ್ಕೆ ಎಂದು ಭಾವಿಸಿ, ದೇವರಲ್ಲಿ ನಂಬಿಕೆ ಇಟ್ಟು ಸನ್ಮಾರ್ಗದಿಂದ ಜೀವನ ಸಾಗಿಸುತ್ತ ನಗುನಗುತ್ತ ಸಂತೋಷದಿಂದ ಮುನ್ನೆಡೆಯುವುದೇ ಈ ಹಬ್ಬದ ಮಹತ್ವವಾಗಿದೆ.



ಕರ್ನಾಟಕ ಆಂದ್ರ ಪ್ರದೇಶಗಳಲ್ಲಿ ಯುಗಾದಿ ಹಬ್ಬವಾದರೆ ಇದೇ ಹಬ್ಬವನ್ನು ಮಹಾರಾಷ್ಟ್ರದಲ್ಲಿ 'ಗುಡಿಪಾಡವಾ' ಎಂದು ಆಚರಿಸುತ್ತಾರೆ. ಹೀಗೆ ದೇಶದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯ ಹೆಸರಿನಿಂದ ಆಚರಿಸುತ್ತಾರೆ. ಈ ಹಬ್ಬದ ದಿನದಂದು ವಿಶೇಷವಾಗಿ ಶ್ರೀರಾಮ, ಶಿವ ಪಾರ್ವತಿ ಗಣೇಶ, ಚೈತ್ರ ನವ ದುರ್ಗಿಯರನ್ನೂ ಕೂಡಾ ಪೂಜಿಸುವದುಂಟು.

ಸಾಮಾನ್ಯವಾಗಿ ಯಾವುದೇ ಹಬ್ಬ ಬಂದರೂ ತಯಾರಿಯ ಸಡಗರ ನಾಲ್ಕಾರುದಿನ ಮುಂಚೆಯೇ ಆರಂಭವಾಗುತ್ತದೆ. ಮನೆ ಸ್ವಚ್ಛಗೊಳಿಸುವುದು, ಮನೆಮಂದಿಗೆಲ್ಲ ಹೊಸ ಬಟ್ಟೆ ಖರೀದಿಸುವುದು ಹಾಗೂ ಅಮವಾಸ್ಯೆ ದಿನ ವಿಧಿವತ್ತಾಗಿ ಪೂಜೆ ಸಲ್ಲಿಸಿದ ನಂತರ ಮರುದಿನ ಪ್ರತಿಪದ, ಸಮೃದ್ಧ ಹಾಗೂ ಅತ್ಯಂತ ಶ್ರೇಷ್ಠ ಮಹೂರ್ತದ ದಿನವಸವಾಗಿದ್ದರಿಂದ ಹೊಸ ಉದ್ಯೋಗ ವ್ಯವಹಾರ ಆರಂಭಿಸುವುದು ಹೀಗೆ ಹಲವಾರು ಕಾರ್ಯಕ್ರಮಗಳ ಭರ್ಜರಿ ತಯಾರಿ ನಡೆಸುತ್ತಾರೆ.

ಮನೆಮನೆಗಳಲ್ಲಿ ಸಾರಿಸಿ ಬಣ್ಣಬಣ್ಣದ ರಂಗವಲ್ಲಿ ಬಿಡಿಸಿ ಬಾಗಿಲಿಗೆ ಹೂವು ಮಾವಿನ ತೋರಣದಿಂದ ಅಲಂಕರಿಸಲಾಗುತ್ತದೆ. ಹಾಗೇಯೇ ದೇವಸ್ಥಾನಗಳಲ್ಲಿ ಕೂಡಾ ಹೂವು ತಳಿರು ತೋರಣ ದಿಂದ ಅಲಂಕರಿಸಿ ಅಭಿಷೇಕ ವಿಶೇಷ ಪೂಜೆ ಪ್ರವಚನ ಪ್ರಸಾದ ವಿತರಣೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ಕೆಲವು ಪ್ರದೇಶದಲ್ಲಿ ಹೋಳಿ ಹಬ್ಬದಂತೆ ಬಣ್ಣದಾಟವಾಡಿದರೆ, ಇನ್ನು ಕೆಲ ಗ್ರಾಮೀಣ ಪ್ರದೇಶದಲ್ಲಿ ಹಬ್ಬದ ಒಂದೆರಡು ದಿವಸ ಬೇಟೆಗೆ ಎಂದು ಅಡವಿಗೆ ಹೋಗಿ ಹಬ್ಬದ ದಿನ ಬೇಟೆ ಸಹಿತ ಪುರ ಪ್ರವೇಶ ಮಾಡುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಇದು ನಿಂತು ಹೋಗಿದೆ. ಮನೆಮನೆಯಲ್ಲಿ ಪಚ್ಚಡಿ, ಸಿಹಿ ಹೋಳಿಗೆ ಪಾಯಸ ಇತ್ಯಾದಿ ಭಕ್ಷ್ಯಗಳನ್ನು ತಯಾರಿಸಿ ದೇವರಿಗೆ ನೈವೇದ್ಯ ತೋರಿಸಿ, ಬಂಧು ಬಳಗದವರೆಲ್ಲ ಒಟ್ಟಿಗೆ ಸೇರಿ ಸಂತೋಷದಿಂದ ಬೇವು–ಬೆಲ್ಲದೊಂದಿಗೆ ಭೋಜನ ಸವಿಯುತ್ತಾರೆ. ಸಾಯಂಕಾಲ ವಿವಿಧ ಮನರಂಜನಾ ಕಾರ್ಯಕ್ರಮವನ್ನೂ ಕೂಡಾ ಆಯೋಜಿಸಿರುತ್ತಾರೆ. ಇನ್ನೊಂದು ವಿಶೇಷವೆಂದರೆ ಆ ದಿನ ಪಂಚಾಂಗ ಪಠಣ ಮಾಡುತ್ತಾರೆ. ತಮ್ಮ ತಮ್ಮ ರಾಶಿಗನುಸಾರವಾಗಿ ಭವಿಷ್ಯ, ಮಳೆ ಬೆಳೆ ಭವಿಷ್ಯ, ದೇಶದ ಭವಿಷ್ಯ ಕುರಿತು ತಿಳಿದುಕೊಳ್ಳಲು ಕಾತುರರಾಗಿರುತ್ತಾರೆ.

ಯುಗಾದಿ ಹಬ್ಬಕ್ಕೂ ಪೃಕೃತಿಗೂ ತುಂಬಾ ನಂಟು. ವಸಂತ ಮಾಸ ಬಂದಿತೆಂದರೆ ಪ್ರಕೃತಿ ಮಾತೆ ಹಸಿರಿನಿಂದ ಕಂಗೊಳಿಸುತ್ತಾಳೆ. 'ಬದಲಾವಣೆ ಜಗದ ನಿಯಮ' ಎನ್ನುವಂತೆ ಎಲೆಗಳೆಲ್ಲ ಬಾಡಿ ಉದುರಿದ ಮರಗಳೆಲ್ಲ ಪುನಃ ಚಿಗುರೊಡೆದು ಹಸಿರುಗಟ್ಟಿ ಹೊಸ ಹೂವು ಕಾಯಿಗಳಿಂದ ಕಂಗೊಳಿಸುವ ಕಾಲ. ಅಂದರೆ ಪ್ರಕೃತಿ ಪ್ರತೀ ವರ್ಷ ಹುಟ್ಟು, ಬಾಲ್ಯ, ಯವ್ವನ ಮುದಿತನವ ಕಂಡು ಹೊಸ ಹರುಷವನ್ನು ಕೊಡುತ್ತದೆ. ಅಂತೆಯೇ ಪ್ರಕೃತಿಯು ಪ್ರತೀ ವರ್ಷ ಹೊಸತು ಹೊಸತನ್ನು ಕಾಣುತ್ತದೆ. ಅದು ಮನುಷ್ಯರಾದ ನಮಗಿಲ್ಲ. ಸತ್ತು ಜನ್ಮಿಸುವ ನಿದ್ದೆಯಂತಿದೆಯಾದರೂ ನಮಗೆ ಮಾತ್ರ ಬಾಲ್ಯ, ಯವ್ವನ, ಮುಪ್ಪು ಒಂದೇ ಬಾರಿ. ಅದನ್ನೇ ಡಾ. ಬೇಂದ್ರೆ ಅವರು "ವರುಷಕೊಂದು ಹೊಸತು ಜನ್ಮ ಹರುಷಕೊಂದು ಹೊಸತು ನೆಲೆಯು ಅಖಿಲ ಜೀವಜಾಲಕೆ ಒಂದೆ ಒಂದು ಜನ್ಮದಲಿ ಒಂದೆ ಬಾಲ್ಯ ಒಂದೆ ಹರಯ ನಮಗದಷ್ಟೆ ಏತಕೋ, ನಿದ್ದೆಗೊಮ್ಮೆ ನಿತ್ಯ ಮರಣ ಎದ್ದ ಸಲ ನವೀನ ಜನನ ನಮಗೆ ಏಕೆ ಬಾರದೋ" ಎಂದು ತಮ್ಮ ಕವನದಲ್ಲಿ ಉಲ್ಲೇಖಿಸಿದ್ದಾರೆ.

ಪಂಚ ಮಹಾ ಭೂತಗಳಿಂದ ಸೃಷ್ಟಿಗೊಂಡ ಪ್ರಕೃತಿಯೊಡನೆ ಮನುಷ್ಯನ ನಂಟು ಕೂಡಾ ಅಷ್ಟೇ ಹೊಂದಿಕೊಂಡಿದೆ. ಮನುಷ್ಯ ಕೂಡಾ ಇದೇ ಪಂಚ ಮಹಾಭೂತಗಳ ಅಂಶಗಳಿಂದ ಸೃಷ್ಟಿಯಾದರೂ ತನ್ನ ಸ್ವಾರ್ಥಕ್ಕಾಗಿ ಪ್ರಕೃತಿ ವಿನಾಶ ಕ್ರಿಯೆಯಲ್ಲಿ ತೊಡಗಿದ್ದಾನೆ. ತತ್ಪರಿಣಾಮವಾಗಿ ಅತೀವೃಷ್ಟಿ, ಅನಾವೃಷ್ಟಿ, ಅತೀಯಾದ ಉಷ್ಣಾಂಶ, ಭೂಕಂಪ ಇತ್ಯಾದಿ ಪ್ರಕೃತಿ ವಿಕೋಪಗಳಿಗೆ ತುತ್ತಾಗುತ್ತಲಿದ್ದೇವೆ. ಪ್ರಕೃತಿಯಿಂದ ಬಂದ ನಾವುಗಳು ಇರುವವರೆಗೆ ಪರಿಸರವನ್ನು ಕಾಪಾಡಿಕೊಳ್ಳುವುದು ಮತ್ತು ಮುಂದಿನ ಪೀಳಿಗೆ ಕೂಡಾ ಕಾಪಾಡೊಕೊಂಡು ಹೋಗುವಂತೆ ಅವರಿಗೆ ಜಾಗೃತಿ ಮೂಡಿಸುವುದು ನಮ್ಮ ಕರ್ತವ್ಯವಾಗಿದೆ.

ಬದುಕಿನಲ್ಲಿ ಬರುವ ಕಷ್ಟ–ಸುಖಗಳನ್ನು ಬೇವು ಬೆಲ್ಲದಂತೆ ಸ್ವೀಕರಿಸಿ, ದೈವತ್ವ ಭಾವದಿಂದ ಸಾಂಪ್ರದಾಯಿಕ ಸಂಸ್ಕತಿಯನ್ನು ಅಳವಡಿಸಿಕೊಂಡು, ನಿತ್ಯ ಕರ್ಮಯೋಗಿಯಾಗಿ, ಪರಿಸರ ಕಾಪಾಡುವ ಮನೋಭಾವಹೊಂದಿ, ಬಿಂಕವ ಬಿಟ್ಟು, ಪ್ರೀತಿ ವಿಶ್ವಾಸವನ್ನು ಹಂಚುತ್ತ, ಹೊಸ ವರ್ಷಕ್ಕೆ ಹೆಜ್ಜೆ ಇಡುವುದೇ ನಿಜವಾದ ಯುಗಾದಿ ಹಬ್ಬದ ಆಚರಣೆ.

## ಅಮ್ಮ ರೆಸ್ಟೋರೆಂಟ್‌ಗೆ ಅಗ್ನಿ, ತಪ್ಪಿದ ದುರಂತ

### ಕುಡುಕರ ಅಡ್ಡೆಯಾದ ಲೇಔಟ್ | ಸಾರ್ವಜನಿಕರಿಗೆ ತಪ್ಪದ ಕಿರಿಕಿರಿ



■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ಎಂ.ಪಿ.ಪ್ರಕಾಶ ನಗರದಿಂದ ಬಸ್‌ಡಿಪೋ ರಸ್ತೆಯಲ್ಲಿರುವ ಅಮ್ಮ ರೆಸ್ಟೋರೆಂಟ್‌ನ ಮೇಲ್ಭಾಗದ ಹುಲ್ಲಿನ ಹೊದಿಕೆ ಇರುವ ಛಾವಣಿಗೆ ಭಾನುವಾರ ಮಧ್ಯಾಹ್ನ ಬೆಂಕಿ ಕಿಡಿ ತಗುಲಿದ್ದು, ಪಕ್ಕದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಟ್ಟಡ ಕಾರ್ಮಿಕರ ಸಮಯಪ್ರಜ್ಞೆ ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಸಕಾಲಕ್ಕೆ ಆಗಮಿಸಿ ಬೆಂಕಿ ನಂದಿಸಿದ್ದರಿಂದ ಹೆಚ್ಚಿನ ಅನಾಹುತ ತಪ್ಪಿದೆ.

ಅಮ್ಮ ರೆಸ್ಟೋರೆಂಟ್ ಪಕ್ಕದಲ್ಲಿ ನಿರ್ಮಿಸಲಾದ ಲೇಔಟ್ ನಿರ್ವಹಣೆ ಕೊರತೆಯಿಂದ ಕುಡುಕರ ಅಡ್ಡೆಯಾಗಿದೆ. ಮದ್ಯಪ್ರಿಯರು ನಿತ್ಯ ಸಂಜೆ ಈ ಲೇಔಟ್‌ನಲ್ಲಿ ಮದ್ಯಬಾಟಲಿ ತಂದು ಕುಡಿಯುವುದು ಸಾಮಾನ್ಯವಾಗಿದೆ. ಧೂಮ್ರಪಾನ ಮಾಡಿ ಬೆಂಕಿ ಸಮೇತ ಸಿಗರೇಟ್ ಬೀಸಾಡುವುದರಿಂದ ಈ ಹಿಂದೆ ಅನೇಕ ಬಾರಿ ಇಲ್ಲಿ ಹೊಗೆ ಕಾಣಿಸಿಕೊಂಡಿದೆ. ಭಾನುವಾರ ಮಧ್ಯಾಹ್ನ ಖಾಸಗಿ ಲೇಔಟ್ ಪಕ್ಕದಲ್ಲಿ ವೀರಶೈವ ಲಿಂಗಾಯತ ರುದ್ರಭೂಮಿ ಇದ್ದು, ಕಿಡಿಗೇಡಿಗಳ ಕೃತ್ಯದಿಂದ ರುದ್ರಭೂಮಿಯೊಳಗೆ ಬೆಂಕಿ ಹೊಗೆಯಾಡಿದೆ. ಗಾಳಿ ರಭಸವಾಗಿದ್ದರಿಂದ ಕಿಡಿಯೊಂದು ಹುಲ್ಲಿನ ಹೊದಿಕೆ ಇರುವ ಅಮ್ಮರೆಸ್ಟೋರೆಂಟ್ ಮೇಲೆ ಬಿದ್ದು ದುರ್ಘಟನೆ ಜರುಗಿದೆ. ಸಂಬಂಧಿಸಿದ ಅಧಿಕಾರಿಗಳು ಇಂತಹ ದುರ್ಘಟನೆಗಳು ಮರುಕಳಿಸದಂತೆ ಸೂಕ್ತ ಕ್ರಮವಹಿಸಬೇಕೆಂದು ಅಮ್ಮ ರೆಸ್ಟೋರೆಂಟ್‌ನ ಮಾಲೀಕರು, ಗ್ರಾಹಕರು, ಸಾರ್ವಜನಿಕರು ಒತ್ತಾಯಿಸಿದ್ದಾರೆ.

## ಉಚ್ಚಂಗಿದುರ್ಗ ಜಾತ್ರೆ ಮದ್ಯಮಾರಾಟ ನಿಷೇಧ

■ ಹಂಪಿ ಟೈಮ್ಸ್ ಹೊಸಪೇಟೆ

ಹರಪನಹಳ್ಳಿ ತಾಲೂಕಿನ ಉಚ್ಚಂಗಿದುರ್ಗದಲ್ಲಿ ನಡೆಯುವ ಶ್ರೀ ಶ್ರೀ ಉತ್ಸವಾಂಭ ದೇವಿಯ ಜಾತ್ರಾ ಮಹೋತ್ಸವ ಕಾರ್ಯಕ್ರಮಗಳು ಸುಗಮವಾಗಿ ನಡೆಯಲು ಹಾಗೂ ಹಾಗೂ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಕಾನೂನು ಸುವ್ಯವಸ್ಥೆ ಹಾಗೂ ಸಾರ್ವಜನಿಕರ ಹಿತಾಸಕ್ತಿ ಕಾಪಾಡುವ ಹಿತದೃಷ್ಟಿಯಿಂದ ಏಪ್ರಿಲ್ 9ರ ಬೆಳಿಗ್ಗೆ 6 ಗಂಟೆಯಿಂದ ಏಪ್ರಿಲ್ 10ರ ಬೆಳಿಗ್ಗೆ 6 ಗಂಟೆಯವರೆಗೆ ಉಚ್ಚಂಗಿದುರ್ಗ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಮದ್ಯದಂಗಡಿಗಳನ್ನು ತಾತ್ಕಾಲಿಕವಾಗಿ ಮುಚ್ಚುವಂತೆ ಹಾಗೂ ಮದ್ಯ ಮಾರಾಟ, ಸಾಗಾಣಿಕೆ ಮಾಡದಂತೆ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ಎಂ.ಎಸ್. ದಿವಾಕರ್ ಅವರು ಆದೇಶ ಹೊರಡಿಸಿದ್ದಾರೆ.

## ಬಸ್ ನಿಲ್ದಾಣದಲ್ಲೇ ಚಾಲಕನ ನಿರ್ಲಕ್ಷ್ಯ ತುಂಡಾಯ್ತು ವ್ಯಕ್ತಿ ಕಾಲು

■ ಹಂಪಿ ಟೈಮ್ಸ್ ಕೊಟ್ಟೂರು

ಕೊಟ್ಟೂರು ಸರ್ಕಾರಿ ಬಸ್ ನಿಲ್ದಾಣದಲ್ಲಿ ಹರಪನಹಳ್ಳಿ ತಾಲೂಕಿನ ಆಲದಹಳ್ಳಿ ಗ್ರಾಮದ ಓಂಕಾರಪ್ಪ (52)ಗೆ ಸರ್ಕಾರಿ ಬಸ್ ಡಿಕ್ಕಿ ಹೊಡೆದ ಪರಿಣಾದ ಕಾಲು ಕಟ್ಟಾಗಿದೆ.

ಓಂಕಾರಪ್ಪ ಮತ್ತು ಆತನ ಪತ್ನಿ ಸಿದ್ದಮ್ಮ ಕಿರಾಣಿ ತರಲೆಂದು ಕೊಟ್ಟೂರಿಗೆ ಆಗಮಿಸಿ ಕಿರಾಣಿ ಖರೀದಿಸಿ ವಾಪಾಸ್ ಊರಿಗೆ ತೆರಳಲು ಕೊಟ್ಟೂರು ಬಸ್ ನಿಲ್ದಾಣದಲ್ಲಿ ಬಸ್ ಗೆ ಕಾಯುತ್ತಿದ್ದ ವೇಳೆ ಈ ದುರ್ಘಟನೆ ಸಂಭವಿಸಿದೆ. ಬಗ್ಗೆ ಕೊಟ್ಟೂರು ಪೋಲಿಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

## ಏ.15ಕ್ಕೆ ಪಿಂಚಣಿ ಅದಾಲತ್

■ ಹಂಪಿ ಟೈಮ್ಸ್ ಬಳ್ಳಾರಿ

ಕಾರ್ಮಿಕರ ಭವಿಷ್ಯ ನಿಧಿ ಪ್ರಾದೇಶಿಕ ಕಚೇರಿ ಬಳ್ಳಾರಿ ಇವರ ವತಿಯಿಂದ ಪಿಂಚಣಿದಾರರ ಕುಂದುಕೊರತೆಗಳನ್ನು ಆಲಿಸಿ ಪರಿಹಾರ ಒದಗಿಸಲು ಏ.15 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಬಳ್ಳಾರಿ ಪ್ರಾದೇಶಿಕ ಕಚೇರಿಯಲ್ಲಿ ಪಿಂಚಣಿ ಅದಾಲತ್ ಏರ್ಪಡಿಸಲಾಗಿದೆ.

ಬಳ್ಳಾರಿ, ಕೊಪ್ಪಳ, ವಿಜಯನಗರ ಮತ್ತು ಚಿತ್ರದುರ್ಗ ಜಿಲ್ಲೆಗಳ ಪಿಂಚಣಿದಾರರು ತಮ್ಮ ಕುಂದುಕೊರತೆಗಳಿದ್ದಲ್ಲಿ ಬಳ್ಳಾರಿಯ ಪ್ರಾದೇಶಿಕ ಕಚೇರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿ, ಇವರಿಗೆ ಪತ್ರ ಅಥವಾ ಇ–ಮೇಲ್ ಮೂಲಕ ತಮ್ಮ ಪಿ.ಪಿ.ಓ ಸಂಖ್ಯೆ ವಿಳಾಸ, ದೂರವಾಣಿ, ಮೊಬೈಲ್ ಸಂಖ್ಯೆ, ಕುಂದು ಕೊರತೆಯ ಸ್ವರೂಪ ಇತ್ಯಾದಿಗಳನ್ನು ಬರೆದು ಪತ್ರ ಮೂಲಕ ಏಪ್ರೀಲ್ 10 ರೊಳಗೆ ಕಳುಹಿಸಬಹುದು. ಪತ್ರ, ಲಕೋಟೆಯ ಮೇಲೆ ಪಿಂಚಣಿ ಅದಾಲತ್ ಎಂದು ಬರೆಯಬೇಕು. ಹೆಚ್ಚಿನ ಮಾಹಿತಿಗಾಗಿ ದೂ.08392–268943 ಗೆ ಸಂಪರ್ಕಿಸಬಹುದು ಎಂದು ಕ್ಷೇತ್ರಿಯ ಭವಿಷ್ಯನಿಧಿ ಆಯುಕ್ತ ಕೆ.ವೆಂಕಟ ಸುಬ್ಬಯ್ಯ ತಿಳಿಸಿದ್ದಾರೆ.

## ಏ.13 ರಂದು ದೇವರ ದಾಸಿಮಯ್ಯ ಜಯಂತಿ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಏ.13 ರಂದು ಬೆಳಗ್ಗೆ 10 ಗಂಟೆಗೆ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮವನ್ನು ನಗರದ ಸಾಂಸ್ಕೃತಿಕ ಸಮುಚ್ಛಯ ಆವರಣದಲ್ಲಿ ಏರ್ಪಡಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ನಾಗರಾಜ ಅವರು ತಿಳಿಸಿದ್ದಾರೆ.

ಲೋಕಸಭಾ ಸಾರ್ವತ್ರಿಕ ಚುನಾವಣಾ ಅಂಗವಾಗಿ ಮಾದರಿ ನೀತಿ ಸಂಹಿತೆ ಜಾರಿ ಇರುವ ಹಿನ್ನಲೆಯಲ್ಲಿ ದೇವರ ದಾಸಿಮಯ್ಯ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಗುತ್ತದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.






















Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA